Sri N. O. SAMAJI.— (Marathi).

ಶ್ರೀ ಎಸ್. ನಿಜಲಿಂಗಪ್ಪ.—ಯಾರು ಯಾರಿಗೆ ಎಷ್ಟೆಷ್ಟು ಶಿಕ್ಷೆ ಕೊಟ್ಟಿದೆ ಎಂಬ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಎಚ್. ನಂಜೇಗೌಡ.—ಲಂಚ ತೆಗೆದುಕೊಂಡ ಮೇಲೆ ತಡಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಬದಲು ಲಂಚಕ್ಕೆ ಮೂಲವಾದ ಪ್ರತಿ ಆಫೀಸನ್ನು inspect ಮಾಡುವುದು ಉತ್ತಮವಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಸೂಚನೆ; ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡ.—ಐವತ್ತೈದು ಗೆಜೆಟೆಡ್ ಅಧಿಕಾರಿಗಳು ಮತ್ತು 188 ನಾರ್ಜ-ಗೆಜೆಟೆಡ್ ಅಧಿಕಾರಿಗಳಿಗೆ ಶಿಕ್ಷೆಯಾಗಿದೆಯೆಂದು ತಿಳಿಸಲಾಗಿದೆ, ಇಷ್ಟು ಕೆಲಸ ಮಾಡುವುದಕ್ಕೇ ಲಂಚನಿರೋಧ ಇಲಾಖೆ ಇರುವುದು ?

ಶ್ರೀ ಎಸ್. ನಿಜಲಿಂಗಪ್ಪ.—ಸಾವಿರಾರು ದೂರು ಅರ್ಜಿಗಳು ಬಂದಿರುತ್ತವೆ, ಅವನ್ನೆಲ್ಲಾ ನೋಡಿ ಎಷ್ಟು ನ್ಯಾಯವಾಗಿವೆ ಎನ್ನುವುದನ್ನು ನೋಡಿ, ಅವುಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಲಂಚ ನಿರೋಧ ಯಶಸ್ವಿಯಾಗಲು ಖಾನಗಿ ಸಮಿತಿಯನ್ನು ರಚನೆ ಮಾಡಿ, ಕಾರ್ಯ ನಡೆಸುವುದಕ್ಕಾಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಸಾಧ್ಯವಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಲಂಚದ ಇಲಾಖೆ ಹುಟ್ಟಿದ ಮೇಲೆ ಲಂಚ ಹೆಚ್ಚಾಯಿತೆಂಬುದು ಗೊತ್ತಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಕೊಡುವವರ ಶಕ್ತಿ ಜಾಸ್ತಿಯಾಗಿರಬಹುದು.

ಶ್ರೀ ಸಿ. ಆರ್. ರಂಗೇಗೌಡ.—'ಎ' ಭಾಗದ ಉತ್ತರದಲ್ಲಿ 1-7-1959ರಿಂದ 30-6-1962ರ ಅವಧಿಯಲ್ಲಿ 165ಗೆಜೆಟೆಡ್ ಅಧಿಕಾರಿಗಳು ಮತ್ತು 599 ಜನ ನಾರ್ಜ-ಗೆಜೆಟೆಡ್ ಅಧಿಕಾರಿಗಳ ಮೇಲೆ ಕೇಸ್ ಹಾಕಿದೆಯೆಂದಿದೆ, ಆದರೆ ಅಪೆಂಡಿಕ್ಸ್‌ನಲ್ಲಿ 165 ಜನ ಗೆಜೆಟೆಡ್ ಮತ್ತು 592 ಜನ ನಾರ್ಜ-ಗೆಜೆಟೆಡ್ ಅಧಿಕಾರಿಗಳ ಮೇಲೆ ಕೇಸ್ ಹಾಕಿದೆ ಎಂದಿದೆ; ಇನ್ನು ಏಳು ಕೇಸುಗಳೇನಾದವು?

ಶ್ರೀ ಎಸ್. ನಿಜಲಿಂಗಪ್ಪ.—ವಿಚಾರಣೆ ನಡೆಯುತ್ತಿದೆ.

ಶ್ರೀ ಎಸ್. ಶಿವಪ್ಪ.—ತಾವು ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ 1959ನೆಯ ಇಸವಿಯಿಂದ 1962ನೆಯ ಇಸವಿಯವರೆಗೆ 592 ಜನ ನಾರ್ಜ-ಗೆಜೆಟೆಡ್ ಮತ್ತು 165 ಜನ ಗೆಜೆಟೆಡ್ ಅಧಿಕಾರಿಗಳನ್ನು ಬುಕ್ ಮಾಡಿದ್ದಾರೆ, ಇತ್ಯರ್ಥವಾಗಿರುವುದು 70 ಮತ್ತು 306 ಜನ ಬಗ್ಗೆ ಕೇಸುಗಳು; ಎಂದರೆ ಎಷ್ಟು ಕೇಸ್ ಬುಕ್ ಮಾಡಿದ್ದಾರೋ ಅದರಲ್ಲಿ ಸುಮಾರು ಅರ್ಧದಷ್ಟು ಮಾತ್ರ ತೀರ್ಮಾನವಾಗಿರುವುದು. ಇದರಿಂದ ಲಂಚ ನಿರೋಧ ಇಲಾಖೆ ತೃಪ್ತಿಕರವಾಗಿ ಕೆಲಸಮಾಡಿಲ್ಲವೆಂದು ಅರ್ಥವಾಗುವುದಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ, ಹಾಗಾಗುವುದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ 70 ಜನ ಗೆಜೆಟೆಡ್ ಅಧಿಕಾರಿಗಳು ಅಪಾದನೆಗೊಳಗಾಗಿದ್ದಾರೆಂದರೆ ಈ ಇಲಾಖೆಯ ಗೆಜೆಟೆಡ್ ಅಧಿಕಾರಿಗಳಲ್ಲಿ ಲಂಚ ಹೆಚ್ಚಾಗಿದೆಯೆಂದಾಯಿತಲ್ಲವೆ?

ಶ್ರೀ ಎಸ್. ನಿಜಲಿಂಗಪ್ಪ.—ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಬಿ. ಚನ್ನಬೈರೇಗೌಡ.—ಅಂಥವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ತೆಗೆದುಕೊಂಡಿದ್ದೇವೆ, ಅದರಿಂದಲೇ ಇಷ್ಟು ಜನರು ಸಿಕ್ಕಿರುವುದು.

ಶ್ರೀ ಬಿ. ಚನ್ನಬೈರೇಗೌಡ.—ನಿಮ್ಮ ಕಾಲದಲ್ಲಿ ಇನ್ನೂ ಉಗ್ರಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅಂಥ ಸಂದರ್ಭ ಬಂದಾಗ ತೆಗೆದುಕೊಳ್ಳುತ್ತೇವೆ.

Sri SANJEEVANATH AIKALA.—What is the exact nature of the corruption inside the jail.

Sri S. NIJALINGAPPA.—I have no information. Very few things leak out from the Jail. Let him put another question.

ಶ್ರೀ ಕೆ. ಲಕ್ಕಪ್ಪ.—ಲಂಚ ನಿರೋಧ ಇಲಾಖೆಯವರು ಲಂಚ ತೆಗೆದುಕೊಳ್ಳುವವರನ್ನು ಹಿಡಿಯುತ್ತಾರೆ, ಲಂಚ ಕೊಡುವವರನ್ನೂ ಹಿಡಿಯಬೇಕೆಂಬ ವಿಚಾರ ವೇನಾದರೂ ಪರಿಶೀಲನೆಯಲ್ಲಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಜನರಿಗೆ ಈ ಬಗ್ಗೆ ಸಾಕಷ್ಟು ತಿಳಿಸಿದರೆ ಅದರಿಂದ ಒಳ್ಳೆಯದಾಗಬಹುದು.

Providing Drinking Water Wells in Gundlupet Taluk.

*Q.—542. Smt. K. S. NAGARATHNAMMA (Gundlupet).—

Will the Government be pleased to state :—

(*a*) the number of villages in Gundlupet Taluk, where people are put to hardships for want of drinking water wells ;

(*b*) whether they would take measures to provide alternative drinking water facilities in villages wherein in spite of sinking wells water is not struck ?

A.—Sri KONDAJJI BASAPPA (Deputy Minister for Co-operation).—

(*a*) Six.

(*b*) The matter is under the consideration of Government.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರ್ಕಾರ ಕೊಟ್ಟಿರುವ ಈ ಉತ್ತರದಲ್ಲಿ ಆರು ಗ್ರಾಮಗಳ ಎಂದು ಹೇಳಿದ್ದಾರೆ, ನನಗೆ ತಿಳಿದ ಹಾಗೆ 15-16 ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದೆ ತೊಂದರೆ ಪಡುತ್ತಿದ್ದಾರೆ, ಹೀಗೆ ತಪ್ಪು ವರದಿಕೊಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

Sri KONDAJJI BASAPPA.—The information given is that out of 121 villages, only six villages have not got drinking water facilities and all the others have got.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಆರು ಗ್ರಾಮಗಳು ಯಾವುವು ?

ಶ್ರೀ ಕೊಂಡಜ್ಜಿ ಬಸಪ್ಪ.—ತೆಂಕಲಹುಂಡಿ, ವಡ್ಡನ ಹೊಸಹಳ್ಳಿ, ಸಿದ್ದಾಪುರ, ಲಕ್ಕಿಪುರ, ಮದ್ದೂರು, ಸಂಗೇಗೌಡನ ಹುಂಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇನ್ನೂ ಏಳೆಂಟು ಗ್ರಾಮಗಳ ಹೆಸರುಗಳನ್ನು ನಾನು ಅಮೇಲೆ ಕೊಡುತ್ತೇನೆ. Alternative drinking water facilities ಕೊಡುತ್ತೇವೆಂದು ಹೇಳುತ್ತೀರಿ, ಯಾವ ರೀತಿ ಕೊಡುತ್ತೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಕೆಲವು ಗ್ರಾಮಗಳಲ್ಲಿ ಬಾವಿ ತೋಡಿದರೆ 50 ಅಡಿಗಳ ಮೇಲೆ ಆಳ ಹೊದರೂ ನೀರು ಸಿಕ್ಕದೇ ಇರುವುದರಿಂದ, ಇಂಡಿಯಾ ಸರ್ಕಾರದವರು ನಮಗೊಂದು ಸಲಹೆ ಕೊಟ್ಟಿದ್ದಾರೆ. "ಎಲ್ಲೆಲ್ಲ ಆಳವಾಗಿ ಹೋದರೂ ನೀರು ಸಿಕ್ಕುವುದಿಲ್ಲವೋ ಅಂಥ ಸ್ಥಳಗಳ ಒಂದು ಪಟ್ಟಿ ಮಾಡಿ, ಆ ಬಗ್ಗೆ ಒಂದು ಯೋಜನೆ ಮಾಡಿ, ನಾವು ಅಧಿಕಾರಿಗಳನ್ನು ಕಳುಹಿಸುತ್ತೇವೆ, ಅದಕ್ಕೆ ಪೂರ್ತಿ ಹಣವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಅದರ ಪ್ರಕಾರ ನಾವು ಒಂದು ಯೋಜನೆಯನ್ನು ತಯಾರುಮಾಡಿ ಆ ಅಧಿಕಾರಿಗಳನ್ನು ಕರೆಸಿಕೊಂಡು ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ದೇತಾಪುರದಲ್ಲಿ ನಾಲ್ಕು ಬಾವಿಗಳನ್ನು ತೋಡಿ, ಒಂದು ಬಾವಿಯಲ್ಲಿಯೂ ನೀರು ಬಂದಿಲ್ಲ. ಯೋಜನೆ ತಯಾರು ಮಾಡುವುದರಲ್ಲೇ ಈಗಾಗಲೇ 15 ವರ್ಷಗಳಾಗುತ್ತಾ ಬಂತು, ಯಾವಾಗ ಪರಿಹಾರ ಕೊಡುತ್ತೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಬಗ್ಗೆ ಇಂಡಿಯಾ ಸರ್ಕಾರದ ಕಾಗದ 16-8-1962ರಲ್ಲಿ ನಮಗೆ ಬಂದಿದೆ, ತಕ್ಷಣ ಮುಂದಿನ ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ.

Construction of a Dam across a Halla near Yadiyala in Nanjangud Taluk.

*Q.—561 Sri N. RACHAIAH (Nanjangud).—

Will the Government be pleased to state :—

(*a*) whether it is not a fact that about 500 acres of land would be irrigated if a dam is constructed across a halla near Yadiyala in Nanjangud Taluk ;

(*b*) if so, whether they intend to construct the same ?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) This will be examined.

ಶ್ರೀ ಎನ್. ರಾಚಯ್ಯ.—ನಂಜನಗೂಡು ತಾಲ್ಲೂಕು ಎಡಿಯಾಳದ ಹಳ್ಳಕ್ಕೆ ಕಟ್ಟೆ ಕಟ್ಟಿದರೆ ಸುಮಾರು 500 ಎಕರೆ ನೀರಾವರಿಯಾಗುತ್ತದೆಂದು ಹೇಳಿದ್ದುದು ನಿಜವಲ್ಲವೇ ?

† ಶ್ರೀ ಆಲೂರು ಹನುಮಂತಪ್ಪ—ಅರವತ್ತು ಎಕರೆ ವರೆಗೆ ಆಗಬಹುದೆಂದು ಅಂದಾಜು ತಯಾರಾಗುತ್ತಿದೆ.

ಶ್ರೀ ಎನ್. ರಾಚಯ್ಯ.—ಆಲ್ಲಿ ಅಣೆಕಟ್ಟು ನಿರ್ಮಾಣ ಮಾಡುವುದು ಸರ್ಕಾರದ ಉದ್ದೇಶವೆ ?

ಶ್ರೀ ಆಲೂರು ಹನುಮಂತಪ್ಪ.—Investigation ನಡೆಯುತ್ತಿದೆ.

ಶ್ರೀ ಎನ್. ರಾಚಯ್ಯ.—ಐದಾರು ಗ್ರಾಮಗಳಿಗೆ ಅನುಕೂಲವಾಗುತ್ತದಲ್ಲದೆ, ಹೆಚ್ಚು ಆಹಾರ ಬೆಳೆಯುವ ಉದ್ದೇಶ ಸರ್ಕಾರಕ್ಕಿರುವುದರಿಂದ ಇದಕ್ಕೆ ಗಮನ ಕೊಡುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಉದ್ದೇಶವಿದೆ, ಪರೀಕ್ಷೆ ಮಾಡುತ್ತಿದ್ದಾರೆ.

ಶ್ರೀ ಎಚ್. ರಾಚಯ್ಯ.—ಇಂಜಿನಿಯರು ಯಾವಾಗಲೂ ನೀರು ಹರಿಯುತ್ತಿರುವ ಹಳ್ಳವನ್ನು ಬಿಟ್ಟು ಬೇರೆ ಹಳ್ಳಕ್ಕೆ ಪ್ಲಾನ್‌ಮಾಡಿ ಕಳುಹಿಸಿದ್ದಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—Investigation ಪೂರ್ತಿ ಆಗಿಲ್ಲ, ಆದ ಮೇಲೆ ಏನು ಸಾಧ್ಯವೋ ಅದನ್ನು ಮಾಡುತ್ತೇವೆ.

9-00 A.M.

ಶ್ರೀ ಡಿ. ಎಂ. ಸಿದ್ದಯ್ಯ.—ಎಡಿಯಾಲ ಹಳ್ಳವನ್ನು Investigation ಮಾಡಿಸಿ 500 ಎಕರೆ irrigate ಆಗುವುದಿಲ್ಲವೆಂದು ಹೇಳುತ್ತಿದ್ದೀರಾ, ಅಥವಾ ಏನೂ Investigation ಮಾಡಿಸದೆ ಹಾಗೇ ಹೇಳುತ್ತಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—'Rough' ಅಂದಾಜಿನ ಮೇಲೆ ಹೇಳುತ್ತಿದ್ದೇನೆ. ಐದುನೂರು ಎಕರೆಗಳಾಗುವ ಪ್ರಾಜೆಕ್ಟ್ ಆಗಿಲ್ಲದಿರಬಹುದು.

ಶ್ರೀ ಡಿ. ಎಂ. ಸಿದ್ದಯ್ಯ.—ಸರಿಯಾಗಿ Investigation ಮಾಡುವುದಕ್ಕೆ ಮುಂಚೆಯೇ 50-60 ಎಕರೆಗಳ ಪ್ರಾಜೆಕ್ಟ್ ಆಗಬಹುದೆಂದು ಯಾವ ಆಧಾರದ ಮೇಲೆ ಹೇಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅಂದಾಜಿನ ಮೇಲೆ ಹೇಳಿದೆ. ಹೆಚ್ಚಾದರೆ ಸಂತೋಷ.

ಶ್ರೀ ಬಿ. ಕೆ. ಪುಟ್ಟಯ್ಯ.—ಈ ಅಂದಾಜಿನ ಪೊಬಲಗೆಷ್ಟು ?

ಶ್ರೀ ಆಲೂರು ಹನುಮಂತಪ್ಪ.—ಇನ್ನೂ finalise ಆಗಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—50-60 ಎಕರೆ ಎಂಬುದು ಸ್ಥಳ ಬದಲಾವಣೆ ಮಾಡಿದ್ದರಿಂದಲ್ಲವೇ ! ಶ್ರೀಮಾನ್ ರಾಚಯ್ಯನವರು ಹೇಳಿದ ಹಾಗದಲ್ಲೇ ಮಾಡಿದರೆ ಕೊನೆಯ ಪಕ್ಷ 100 ಎಕರೆಗಳಿಗಿಂತಲೂ ಹಾನಿ ಎಕರೆಗಳಾಗುತ್ತವೆಂದು ಗೊತ್ತಿದೆಯೇ ?